**ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ ಪೊನ್ನಂಪೇಟೆ.**

**ಸಿ.ಸಿ.ಸಂಖ್ಯೆ1138/2023**

ಫಿರ್ಯಾದುದಾರು : ಶ್ರೀ ಮಂಜು ಎಸ್.ಬಿ ಯಾನೆ
ಮಂಜುನಾಥ್ ಎಸ್.ಬಿ,
ತಂದೆಃ ಪೌತಿ ಬೋರ್ ಶೆಟ್ಟಿ,
ಪ್ರಾಯಃ 44 ವರ್ಷ,
ವಾಸಃ ಕಾರ್ಪೋರೇಷನ್ ಬ್ಯಾಂಕ್ ಹಿಂಭಾಗ,
8ನೇ ಬ್ಲಾಕ್, ಗೋಣಿಕೊಪ್ಪ,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

**---ವಿರುದ್ದ –**

ಆರೋಪಿ : ಶ್ರೀಮತಿ ಮಮತ,
ಗಂಡಃ ಸೋಮೆಗೌಡ,
ಪ್ರಾಯಃ 40 ವರ್ಷ,
ವಾಸಃ 10 ನೆ ಕ್ರಾಸ್, 3ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು 560 041.

**ಆರೋಪಿಯಾದ ನಿಮ್ಮ ವಿರುದ್ದ ಇರುವ ಆಪಾದನೆ ಏನೆಂದರೆ**

ಆರೋಪಿಯಾದ ನೀವು ಪಿರ್ಯಾದಿದಾರರಾದ ಶ್ರೀ ಮಂಜು ಎಸ್.ಬಿ ಯಾನೆ ಮಂಜುನಾಥ್ ಎಸ್.ಬಿ, ಅವರಿಂದ ನಿಮ್ಮ ಹಣಕಾಸಿನ ಅಗತ್ಯಕ್ಕಾಗಿ 2022 ನೆ ಇಸವಿಯ ಮೇ ತಿಂಗಳಿನಲ್ಲಿ ರೂ.50,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ನಂತರ ಪಿರ್ಯಾದಿದಾರರು ಸಾಲವನ್ನು ಮರುಪಾವತಿಸುಂತೆ ಕೇಳಿದಾಗ ಆರೋಪಿಯಾದ ನೀವು ನಿಮ್ಮ ಕರ್ನಾಟಕ ಬ್ಯಾಂಕ್, ಬನಶಂಖರಿ ಶಾಖೆಯ ದಿಃ01.05.2023ರ 666476 ನಂಬರಿನ ಚೆಕ್ಕನ್ನು ಸಾಲದ ಬಾದ್ಯತೆಗಾಗಿ ನೀಡಿದ್ದು, ನಂತರ ಪಿರ್ಯಾದಿದಾರರು ಸದರಿ ಚೆಕ್ ಅನ್ನು ನಗದೀಕರಣಕ್ಕಾಗಿ ಕೆನರ ಬ್ಯಾಂಕ್, ಪೊನ್ನಂಪೇಟೆ ಶಾಖೆಗೆ ಹಾಜರುಪಡಿಸಿದಾಗ ಸದರಿ ಬ್ಯಾಂಕ್‌ನವರು "payment stopped by drawer" ಎಂದು ಹಿಂಬರಹ ನೀಡಿರುತ್ತಾರೆ. ನಂತರ ಪಿರ್ಯಾದಿದಾರರು ತಮ್ಮ ವಕೀಲರ ಮೂಖಾಂತರ 15 ದಿನಗಳೊಳಗೆ ಚೆಕ್ ಹಣವನ್ನು ಹಿಂದಿರುಗಿಸುವಂತೆ ದಿಃ 27.07.2023 ರಂದು ಕಾನೂನು ರೀತಿಯ ನೋಟಿಸನ್ನು ನೀಡಿದ್ದರು ಸಹ ನೀವು ಚೆಕ್ ಮೊತ್ತವನ್ನು ನಿಗದಿತ ಸಮಯದಲ್ಲಿ ಪಿರ್ಯಾದಿದಾರರಿಗೆ ಕೊಡದೇ ಮೋಸ ಮಾಡಿದ್ದು, ಇದು ವ್ಯವಹರಣೆಯ ಲಿಖಿತಗಳ

ಅಧಿನಿಯಮ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿದ್ದು, ಈ ನ್ಯಾಯಾಲಯದ ವಿಚಾರಣಾಧಿಕಾರ ವ್ಯಾಪ್ತಿಯಲ್ಲಿ ಮಾಡಿರುವುದಾಗಿ ಆರೋಪಿಸಲಾಗಿದೆ.

**ಆರೋಪಿಯ ಹೇಳಿಕೆ**

1. ಪ್ರಶ್ನೆ - ಇದೀಗ ಓದಿ ಹೇಳಿದ ಆರೋಪಣೆಯು ನಿಮಗೆ ಅರ್ಥವಾಯಿತೆ ?

ಉತ್ತರಃ ಅರ್ಥವಾಯಿತು

2. ಪ್ರಶ್ನೆ - ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಬಯಸುವಿರಾ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಬೇಕು.

(ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ದಿಃ11.07.2025 ರಂದು ಆರೋಪಿಗೆ ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ).

sd/-
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಲಯ, ಪೊನ್ನಂಪೇಟೆ,